**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ ವೆಂಕಟೇಶ್ ಇವರು ನಿಯಮ 72ರಡಿ ಮಂಡಿಸಿರುವ ಸೂಚನೆಗೆ ಹೇಳಿಕೆ**

**ವಿಷಯ: ರಾಜ್ಯದಲ್ಲಿ 545 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಪಿಎಸ್‌ಐ) (ಸಿವಿಲ್) ಗಳ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರದ ಮೂಲಕ ಅಕ್ರಮ ನೇಮಕಾತಿ ಪ್ರಕ್ರಿಯೆಯ ಬಗ್ಗೆ ಮಾನ್ಯ ಗೃಹ ಸಚಿವರನ್ನು ನಿಯಮ 72ರಡಿಯಲ್ಲಿ ಗಮನ ಸೆಳೆಯ ಬಯಸುತ್ತೇನೆ.**

**ಸರ್ಕಾರದ ಉತ್ತರ**

ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಪಿ.ಎಸ್.ಐ) (ಸಿವಿಲ್) 545 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಿಂದ ದಿನಾಂಕ: 21.01.2021 ರಂದು ಅಧಿಸೂಚನೆಯನ್ನು ಹೊರಡಿಸಿ ದಿನಾಂಕ: 03.10.2021 ರಂದು ರಾಜ್ಯದ 07 ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ. ದಿನಾಂಕ: 19.01.2022 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು.

ಲಿಖಿತ ಪರೀಕ್ಷೆಗಳನ್ನು ನಡೆಸುವ ಪೂರ್ವದಲ್ಲಿ ಪರೀಕ್ಷೆಗಳನ್ನು ನಡೆಸುವ ಸಂಬಂಧ ಹಾಜರಾಗುವ ಅಭ್ಯರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಶಾಲಾ / ಕಾಲೇಜುಗಳನ್ನು ಗುರುತಿಸಿ. ಮಾಹಿತಿ ನೀಡುವಂತೆ ಪರೀಕ್ಷೆ ನಡೆಸಬೇಕಾಗಿರುವ ಪೊಲೀಸ್ ಕಮೀಷನರೇಟ್ / ಜಿಲ್ಲಾ ಕೇಂದ್ರಗಳ ಘಟಕಾಧಿಕಾರಿಗಳಿಗೆ ನೇಮಕಾತಿ ಘಟಕದಿಂದ ಕೋರಲಾಗಿರುತ್ತದೆ. ಅದರಂತೆ ಘಟಕಾಧಿಕಾರಿಗಳು ಲಿಖಿತ ಪರೀಕ್ಷೆಗಳನ್ನು ನಡೆಸುವ ಸಂಬಂಧ ಶಾಲಾ / ಕಾಲೇಜುಗಳ ಮುಖ್ಯಸ್ಥರಿಂದ ಅನುಮತಿಯನ್ನು ಪಡೆದು ಸದರಿ ಶಾಲಾ / ಕಾಲೇಜುಗಳ ಮಾಹಿತಿಯನ್ನು ನೇಮಕಾತಿ ಕಛೇರಿಗೆ ಸಲ್ಲಿಸಿರುತ್ತಾರೆ. ಅದರಂತೆ ಲಿಖಿತ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.

ಘಟಕಾಧಿಕಾರಿಗಳು ಸಲ್ಲಿಸಿರುವ ಶಾಲಾ / ಕಾಲೇಜುಗಳ ಮಾಹಿತಿಯನ್ನು ಆಧರಿಸಿ, ಅವಶ್ಯಕತೆ ಇರುವಷ್ಟು ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ನಿಗದಿಪಡಿಸಿ. ಅದರಂತೆ ಅಭ್ಯರ್ಥಿಗಳಿಗೆ ಹಾಲ್ ಟಿಕೇಟ್‌ಗಳನ್ನು ಆನ್–ಲೈನ್ ಮೂಲಕ ಅಪ್‌ಲೋಡ್ ಮಾಡಲಾಗಿರುತ್ತದೆ.

ದಿನಾಂಕ: 07.04.2022 ರಂದು ಸದರಿ ಲಿಖಿತ ಪರೀಕ್ಷೆಯಲ್ಲಿ ಅವ್ಯವಹಾರಗಳು ನಡೆದಿರುವ ಬಗ್ಗೆ ದೂರುಗಳು ಸ್ವೀಕೃತಗೊಂಡ ಹಿನ್ನೆಲೆಯಲ್ಲಿ ರೋಲ್ ನಂ.9221946ನ್ನು ಹೊಂದಿದ ಅಭ್ಯರ್ಥಿಯು ಎಸಗಿದ ಅಕ್ರಮಗಳ ಕುರಿತು ಸಿಐಡಿ ತನಿಖೆಗೆ ಆದೇಶಿಸಲಾಗಿರುತ್ತದೆ.

ದಿನಾಂಕ:08.04.2022 ರಂದು ಸಿಐಡಿಯು ಈ ಬಗ್ಗೆ ವಿಚಾರಣೆಯನ್ನು ಪ್ರಾರಂಭಿಸಿದ್ದು, ಮೇಲ್ನೋಟಕ್ಕೆ ರೋಲ್ ನಂ.9221946ನ್ನು ಹೊಂದಿದ ಅಭ್ಯರ್ಥಿಯು ಓ.ಎಂ.ಆರ್ ಅವ್ಯವಹಾರವನ್ನೆಸಗಿರುವುದು ಕಂಡುಬಂದಿದ್ದರ ಮೇರೆಗೆ ಸಿಐಡಿಯ ವಿಚಾರಣಾಧಿಕಾರಿಯವರು ದಿನಾಂಕ: 09.04.2022 ರಂದು ಕಲಬುರ್ಗಿ ನಗರ ಚೌಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಮೊಕದ್ದಮೆ ಸಂಖ್ಯೆ: 48/2022. ಕಲಂ 120(ಬಿ), 465, 468, 471, 420 ಮತ್ತು 34 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಕಲಬುರ್ಗಿ ನಗರದಲ್ಲಿ ನಡೆದ ಅವ್ಯವಹಾರಗಳು / ದಾಖಲಾದ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು, ಎಲ್ಲಾ ಸಫಲವಾದ ಅಭ್ಯರ್ಥಿಗಳ ಓಎಂಆರ್ ಹಾಳೆಗಳನ್ನು ತಜ್ಞರ ಪರೀಕ್ಷೆಗಾಗಿ ನ್ಯಾಯ ವಿಜ್ಞಾನ ಪ್ರಯೋಗಾಲಯಕ್ಕೆ ಹಂತ ಹಂತವಾಗಿ ಕಳುಹಿಸಲಾಗಿತ್ತು. ತಜ್ಞರ ಅಭಿಪ್ರಾಯ ವರದಿಗಳಿಂದ ಬೆಂಗಳೂರು ನಗರದ 07 ಪರೀಕ್ಷಾ ಕೇಂದ್ರಗಳ ಒಟ್ಟು 22 ಅಭ್ಯರ್ಥಿಗಳ ಓಎಂಆರ್ ಹಾಳೆಗಳಲ್ಲಿ ತಿದ್ದುವಿಕೆ ನಡೆದಿರುವುದು ಕಂಡುಬಂದಿರುತ್ತದೆ

ಈ ಸಂಬಂಧ ಸಿಐಡಿ ಯ ಸಹಾಯಕ ತನಿಖಾಧಿಕಾರಿಯವರು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 60/2022, ಕಲಂ 465, 468, 471, 420, 120 (ಬಿ) ರೆ/ವಿ 34 ಐಪಿಸಿ ರಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ.

ಪುಟ 2ಕ್ಕೆ

ಈ ಪ್ರಕರಣದಲ್ಲಿ ನೇಮಕಾತಿ ವಿಭಾಗದ ಸ್ಟ್ರಾಂಗ್ ರೂಂನಲ್ಲಿ ಇರಿಸಲಾಗಿದ್ದ ಓ.ಎಂ.ಆರ್ ಹಾಳೆಗಳನ್ನು ತಿದ್ದುವಲ್ಲಿ ಶ್ರೀ ಶಾಂತಕುಮಾರ್, ಡಿವೈಎಸ್ಪಿ, ಮತ್ತು ಇತರರು ಪಾತ್ರ ವಹಿಸಿರುವುದು ಕಂಡುಬಂದಿದ್ದು, ಇವರುಗಳನ್ನು ಬಂಧಿಸಲಾಗಿರುತ್ತದೆ. ನೇಮಕಾತಿ ವಿಭಾಗದ ಅಂದಿನ ಎಡಿಜಿಪಿ ಶ್ರೀ ಅಮೃತ್‌ಪಾಲ್ ರವರು ಸಹ ಇದರಲ್ಲಿ ಶಾಮೀಲಾಗಿರುವುದು ಕಂಡುಬಂದಿದ್ದು, ಇವರನ್ನು ಸಹ ಬಂಧಿಸಲಾಗಿರುತ್ತದೆ.

ಪ್ರಕರಣಗಳ ತನಿಖಾ ಕಾಲದಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು 54104 ಅಭ್ಯರ್ಥಿಗಳ ಡಾಟಾ ಶೀಟ್‌ಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ನಡೆಸಲಾಗಿರುತ್ತದೆ. ಇದರಿಂದ ಕಲಬುರಗಿ ಹಾಗೂ ಬೆಂಗಳೂರಿನಲ್ಲಿ ಕೆಲವು ಅಭ್ಯರ್ಥಿಗಳು ಓಎಂಆರ್ ತಿದ್ದುವ ಮತ್ತು ಬ್ಲೂಟೂತ್ ಸಾಧನದ ಬಳಕೆಯಿಂದ ಪರೀಕ್ಷೆಯಲ್ಲಿ ಅಕ್ರಮಗಳನ್ನು ಎಸಗಿದ್ದಾರೆ ಎಂಬುದು ಕಂಡುಬಂದಿರುತ್ತದೆ. ಆದಕಾರಣ, ಕಲಬುರಗಿಯಲ್ಲಿ 08, ಬೆಂಗಳೂರಿನಲ್ಲಿ 06, ಧಾರವಾಡ ಮತ್ತು ತುಮಕೂರಿನಲ್ಲಿ ತಲಾ 01 ರಂತೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.

ಈ ಪ್ರಕರಣವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಈವರೆಗೂ ಈ ಕೆಳಗಿನಂತೆ ಕ್ರಮಜರುಗಿಸಲಾಗಿರುತ್ತದೆ.

- ಒಟ್ಟಾರೆ ಪಿ.ಎಸ್.ಐ ನೇಮಕಾತಿ ಪರೀಕ್ಷೆ-2021 ಕ್ಕೆ ಸಂಬಂಧಿಸಿದಂತೆ ಬ್ಲೂಟೂತ್ ಬಳಕೆ ಹಾಗೂ ಓ.ಎಂ.ಆರ್ ಶೀಟ್‌ಗಳ ತಿದ್ದುಪಡಿಗೆ ಸಂಬಂಧಿಸಿದಂತೆ 16 ಪ್ರಕರಣಗಳು ದಾಖಲಾಗಿ ಸಿಐಡಿ ತನಿಖೆ ನಡೆದಿರುತ್ತದೆ.
- ದಾಖಲಾಗಿರುವ 13 ಪ್ರಕರಣಗಳಲ್ಲಿ ಪ್ರಾಥಮಿಕ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದ್ದು, ತನಿಖೆಯನ್ನು ಮುಂದುವರೆಸಲಾಗಿರುತ್ತದೆ. ಉಳಿದ 03 ಪ್ರಕರಣಗಳಲ್ಲಿ ತನಿಖೆಯು ಪ್ರಗತಿಯ ಹಂತದಲ್ಲಿರುತ್ತದೆ.
- ಈ ಪ್ರಕರಣಗಳಲ್ಲಿ ಒಟ್ಟಾರೆ 105 ಆರೋಪಿಗಳನ್ನು ಇದುವರೆವಿಗೆ ದಸ್ತಗಿರಿ ಮಾಡಲಾಗಿದ್ದು, ಇವರಲ್ಲಿ 31 ಆರೋಪಿಗಳಿಗೆ ಜಾಮೀನು ದೊರೆತಿರುತ್ತದೆ. ಇತರೆ ಆರೋಪಿಗಳ ಜಾಮೀನು ಅರ್ಜಿಗಳು ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಕೆಳ ನ್ಯಾಯಾಲಯಗಳಲ್ಲಿ ತಿರಸ್ಕೃತಗೊಂಡಿರುತ್ತವೆ.
- ಡಿಜಿಪಿ, ಸಿಐಡಿ ರವರ ಖುದ್ದು ಮೇಲ್ವಿಚಾರಣೆಯಲ್ಲಿ ಸಿಐಡಿ ಅಧಿಕಾರಿಗಳ ತಂಡವು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ತನಿಖೆ ನಡೆಸುತ್ತಿದ್ದು, ಈ ಕುರಿತು ಮಾನ್ಯ ಉಚ್ಚ ನ್ಯಾಯಾಲಯವು ತನಿಖೆಯ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸಿರುತ್ತದೆ.
- ತನಿಖೆಗೆ ಸರ್ಕಾರವು ಮುಕ್ತ ಹಸ್ತ ನೀಡಿರುವುದು ಎಡಿಜಿಪಿ ಮಟ್ಟದ ಅಧಿಕಾರಿಯನ್ನು ಬಂಧಿಸಿರುವುದರಿಂದ ತಿಳಿಯುತ್ತದೆ.
- ಕಲಬುರಗಿ ಪ್ರಕರಣಗಳ ಆರೋಪಿಗಳಿಗೆ ಸಂಬಂಧಿಸಿದ ವಿವಿಧ ಬ್ಯಾಂಕ್ ಖಾತೆಗಳು ಹಾಗೂ ಮ್ಯೂಚುಯಲ್ ಫಂಡ್‌ಗಳಲ್ಲಿನ ರೂ. 08 ಕೋಟಿಗೂ ಅಧಿಕ ಹಣವನ್ನು ಫ್ರೀಜ್ ಮಾಡಲಾಗಿದೆ ಹಾಗೂ 506 ಗ್ರಾಂ (ಸುಮಾರು ರೂ.20.16 ಲಕ್ಷ ಬೆಲೆಯ) ಚಿನ್ನದ ಆಭರಣಗಳನ್ನು ಬ್ಯಾಂಕ್‌ನ ಲಾಕರ್‌ನಿಂದ ವಶಪಡಿಸಿಕೊಳ್ಳಲಾಗಿದೆ.
- ನೇಮಕಾತಿ ವಿಭಾಗದ ಆರೋಪಿತರು ಅಭ್ಯರ್ಥಿಗಳಿಂದ ಸಂಗ್ರಹಿಸಿದ್ದ ರೂ.3.11 ಕೋಟಿಗೂ ಅಧಿಕ ಹಣವನ್ನು ಹಲವಾರು ಸ್ಥಳಗಳಿಂದ ವಶಪಡಿಸಿಕೊಳ್ಳಲಾಗಿದೆ.
- ಸರ್ಕಾರವು ಈ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿಗಳ ವಿಚಾರಣೆ ಕುರಿತು ಗಂಭೀರತೆ ಹೊಂದಿದ್ದು, ಬೆಂಗಳೂರಿನ ಪ್ರಕರಣವನ್ನು ನಿರ್ವಹಿಸಲು ಅನುಭವಿ ವಿಶೇಷ ಅಭಿಯೋಜಕರನ್ನು ನೇಮಿಸಲಾಗಿದ್ದು, ಕಲಬುರಗಿ ಪ್ರಕರಣಗಳನ್ನು ನಿರ್ವಹಿಸಲು ಮತ್ತೊಬ್ಬ ವಿಶೇಷ ಅಭಿಯೋಜಕರನ್ನು ನೇಮಿಸಲು ಕ್ರಮವಹಿಸಲಾಗುತ್ತಿದೆ.

ಪುಟ 3ಕ್ಕೆ

- ಭಾರತೀಯ ದಂಡ ಸಂಹಿತೆ ಕಲಂ 409 ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ 1988ರ ಕಲಂಗಳನ್ನು ಸದರಿ ಪ್ರಕರಣಗಳಲ್ಲಿ ಸೇರ್ಪಡೆಗೊಳಿಸಲಾಗಿರುತ್ತದೆ.
- ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಕ್ರಿಮಿನಲ್ ಪಿಟಿಷನ್ ಸಂಖ್ಯೆ: 5136 / 2022 ರಲ್ಲಿ ಈ ಪ್ರಕರಣಗಳ ತನಿಖೆಯ ಮೇಲ್ವಿಚಾರಣೆಯನ್ನು ನಡೆಸಿರುತ್ತದೆ.
- ವಿಚಾರಣಾ ಸಮಯದಲ್ಲಿ ಅಮೃತ್‌ಪಾಲ್ ರವರು ಹಾರಿಕೆ ಉತ್ತರಗಳನ್ನು ನೀಡುತ್ತಿದ್ದರಿಂದ ನಿಜಾಂಶವನ್ನು ಪತ್ತೆ ಹಚ್ಚುವ ಸಲುವಾಗಿ ಅವರನ್ನು ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಸುಳ್ಳು ಪತ್ತೆ ಪರೀಕ್ಷೆಗೊಳಪಡಿಸಲು ಅನುಮತಿ ಕೋರಿ ಮಾನ್ಯ 1ನೇ ಎಸಿಎಂಎಂ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಆದರೆ, ಅಮೃತ್‌ಪಾಲ್ ರವರು ಒಪ್ಪಿಗೆಯನ್ನು ನೀಡದ್ದರಿಂದ ಅರ್ಜಿ ತಿರಸ್ಕೃತಗೊಂಡಿರುತ್ತದೆ.
- ಪಿಎಸ್‌ಐ ಹುದ್ದೆಗಳ ಮರು ಪರೀಕ್ಷೆಯ ಕುರಿತು ಸರ್ಕಾರದ ವಿರುದ್ಧ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕೆಲವು ಅಭ್ಯರ್ಥಿಗಳು ಸಹ ಕಳಂಕಿತರೆಂದು ತನಿಖೆಯಲ್ಲಿ ಕಂಡುಬಂದಿದ್ದು, ಅವರನ್ನು ಬಂಧಿಸಲಾಗಿರುತ್ತದೆ.
- ಪ್ರಕರಣದಲ್ಲಿ ಭಾಗಿಯಾದ ಸರ್ಕಾರಿ ನೌಕರರು ಮತ್ತು ಪೊಲೀಸ್ ಅಧಿಕಾರಿ / ಸಿಬ್ಬಂದಿಗಳನ್ನು ಅಭಿಯೋಜನೆಗೆ ಒಳಪಡಿಸಲು ಸರ್ಕಾರದಿಂದ ನಿಗದಿತ ಅವಧಿಯೊಳಗೆ ಅಭಿಯೋಜನಾ ಮಂಜೂರಾತಿ ನೀಡಲಾಗಿರುತ್ತದೆ.
- ಪ್ರಕರಣದಲ್ಲಿ ಭಾಗಿಯಾದ ಸರ್ಕಾರಿ ನೌಕರರು ಮತ್ತು ಪೊಲೀಸ್ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಅಧಿಕಾರ ದುರುಪಯೋಗ, ತೀವ್ರತರವಾದ ಕರ್ತವ್ಯಲೋಪ, ಕರ್ತವ್ಯದಲ್ಲಿ ಘೋರ ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನ ಆರೋಪಗಳಡಿ ಅಮಾನತ್ತುಪಡಿಸಲಾಗಿದ್ದು, ಸದರಿಯವರುಗಳ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ ಸಿಐಡಿ ತನಿಖೆಯು ಪ್ರಗತಿಯಲ್ಲಿದ್ದು, ಪಿ.ಎಸ್.ಐ ನೇಮಕಾತಿಯ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವ ಆರೋಪಿತರುಗಳ ವಿರುದ್ಧ ಕಾನೂನು ರೀತ್ಯಾ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಜರುಗಿಸಲಾಗುವುದು.

**ಒಇ 165 ಪಿಇಐ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು